# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2118 (2339) |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 27.03.2026 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | 2025ನೇ ಸಾಲಿನಲ್ಲಿ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬರ ಮತ್ತು ಅತಿಯಾದ ಮಳೆಯ ಅನಿಯಮಿತೆಯನ್ನು ಕಂಡಿದ್ದು, ಉತ್ತರ ಕರ್ನಾಟಕದಲ್ಲಿ ಪ್ರವಾಹ ಮತ್ತು ಮಧ್ಯ ಕರ್ನಾಟಕದಲ್ಲಿ ಬರವನ್ನು ನಿರ್ವಹಿಸಲು ಸರ್ಕಾರ ಯಾವ ರೀತಿ ಯೋಜನೆಗಳನ್ನು ರೂಪಿಸಿಕೊಂಡಿದೆ; ರೈತರಿಗೆ ಅನುಕೂಲವಾಗುವಂತೆ; | 2025ನೇ ಸಾಲಿನಲ್ಲಿ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಅತೀವೃಷ್ಠಿಯಿಂದ ಬೆಳೆಹಾನಿಯಾಗಿರುವ ಬಗ್ಗೆ ಜಿಲ್ಲಾಧಿಕಾರಿ, ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳಿಂದ ಜಂಟಿ ಸಮೀಕ್ಷೆ ನಡೆಸಿ, ಬೆಳೆಹಾನಿಯ ವಿವರಗಳನ್ನು ಅವರು ದೃಢೀಕರಿಸಿ ನೀಡಿರುವಂತೆ, ಭೂಮಿ ಉಸ್ತುವಾರಿ ಕೋಶದಿಂದ ಗ್ರೀನ್ ಲಿಸ್ಟ್ ಜನರೇಟ್ ಆಗಿ ಅರ್ಹ ರೈತ ಫಲಾನುಭವಿಗಳಿಗೆ ದಿನಾಂಕ:11.07.2023ರ ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಗಳನ್ವಯ ಪರಿಹಾರವನ್ನು ಪಾವತಿಸಲಾಗಿದೆ. |
| ಆ. | ಯಾದಗಿರಿಯಂತಹ ಜಿಲ್ಲೆಗಳಲ್ಲಿ ವಿದ್ಯುತ್ ಕೊರತೆ ಮತ್ತು ಪಂಪ್‌ಸೆಟ್ ಗಳಿಗೆ ಹೆಚ್ಚುತ್ತಿರುವ ಡೀಸೆಲ್ ವೆಚ್ಚವನ್ನು ನೀಗಿಸಲು, ಸೌರಶಕ್ತ ಚಾಲಿತ ನೀರಾವರಿಯನ್ನು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮ ಮತ್ತು ಯೋಜನೆಗಳೇನು; | ಯಾದಗಿರಿ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಸೌರ ಶಕ್ತಿ ಚಾಲಿತ ನೀರಾವರಿಯನ್ನು ಉತ್ತೇಜಿಸಲು ಪ್ರಧಾನ್ ಮಂತ್ರಿ ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ತಾನ್ ಮಹಾಭಿಯಾನ್ (PM KUSUM) ಕಾಂಪೋನೆಂಟ್-ಬಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಪಿ.ಎಂ ಕುಸುಮ್ - ಬಿ ಯೋಜನೆಯಡಿ ಜಾಲಮುಕ್ತ ಸೌರ ಪಂಪ್ ಸೆಟ್ ಗಳನ್ನು ಅಳವಡಿಸಿ, ಹಗಲಿನ ವೇಳೆಯೇ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಗ್ರಿಡ್ ಸಂಪರ್ಕಿತ ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಉದ್ದೇಶ ಹೊಂದಲಾಗಿದೆ.<br><br>ಸದರಿ ಯೋಜನೆಯಡಿ 7.5HP ಸಾಮರ್ಥ್ಯಕ್ಕಿಂತ ಹೆಚ್ಚಿನ ಸೌರ ಪಂಪ್ ಸೆಟ್ ಗಳನ್ನು ಅಳವಡಿಸಿಕೊಳ್ಳಬಹುದಾಗಿದ್ದು, ಸಹಾಯಧನವನ್ನು ಮಾತ್ರ 7.5HP ಸಾಮರ್ಥ್ಯಕ್ಕೆ ಸೀಮಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದಿಂದ ಶೇ.30ರಷ್ಟು, ರಾಜ್ಯ ಸರ್ಕಾರದಿಂದ ಶೇ. 50 ರಷ್ಟು (ಶೇ. 30 ರಿಂದ ಶೇ. 50 ಕ್ಕೆ ಹೆಚ್ಚಿಸಲಾಗಿದೆ) ಮತ್ತು ಉಳಿದ ಶೇ. 20ರಷ್ಟು ವಂತಿಗೆಯನ್ನು ರೈತರಿಂದ ಭರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಈವರೆಗೆ 56,000 ಪಂಪ್ ಸೆಟ್ ಗಳು ಹಂಚಿಕೆಯಾಗಿದ್ದು, ಒಟ್ಟು 8016 ಸಂಖ್ಯೆ ಸೌರಪಂಪ್ ಸೆಟ್‌ಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲಾಗಿದೆ ಮತ್ತು ಬಾಕಿ ಪಂಪ್ ಸೆಟ್ ಗಳನ್ನು ಮಾರ್ಚ್-2026ರೊಳಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. |

<table>
<tr>
<td></td>
<td></td>
<td>ಸದರಿ ಯೋಜನೆಯಡಿ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 1619 ಸಂಖ್ಯೆಯ ಅರ್ಜಿಗಳು ನೊಂದಣಿಗೊಂಡಿದ್ದು, ಇದರಲ್ಲಿ ದಿನಾಂಕ: 24.03.2026 ರವರೆಗೆ 76 ರೈತರುಗಳಿಗೆ ಸೌರ ಪಂಪ್ ಸೆಟ್‌ಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲಾಗಿದೆ. ಇನ್ನುಳಿದ ಅರ್ಜಿಗಳಿಗೆ ಸೌರ ಪಂಪ್‌ಸೆಟ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ.</td>
</tr>
<tr>
<td>ಇ.</td>
<td>ರಾಷ್ಟ್ರೀಯ ಮಟ್ಟದಲ್ಲಿ ರಸಗೊಬ್ಬರ ಸಬ್ಸಿಡಿಯನ್ನು 3,400 ಕೋಟಿ ರೂ.ಗಳಿಗೂ ಹೆಚ್ಚು ಕಡಿತಗೊಳಿಸಿದ್ದು, ಸಣ್ಣ ರೈತರಿಗೆ ಗುಣಮಟ್ಟದ ಬೀಜಗಳು, ಜೈವಿಕ ಗೊಬ್ಬರ ಮತ್ತು ಕೀಟನಾಶಕಗಳು ಕೈಗೆಟಕುವ ದರದಲ್ಲಿ ಲಭ್ಯವಾಗುವಂತೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳ ಏನು;</td>
<td>ಕೇಂದ್ರ ಸರ್ಕಾರವು ರಸಗೊಬ್ಬರ ಸಬ್ಸಿಡಿಗಾಗಿ ಹಂಚಿಕೆ ಮಾಡಿದ ಮತ್ತು ವಿತರಣೆಯಾದ ಸಹಾಯಧನದ ವಿವರ ಕೆಳಗಿನಂತಿದೆ:<br>
ಕೋಟಿ ರೂಗಳಲ್ಲಿ
<table>
<tr><th>ಆರ್ಥಿಕ ವರ್ಷ</th><th>ಹಂಚಿಕೆ</th><th>ವೆಚ್ಚ</th></tr>
<tr><td>2023-24</td><td>1,95,421</td><td>1,95,420.51</td></tr>
<tr><td>2024-25</td><td>1,77,129.5</td><td>1,77,129.5</td></tr>
<tr><td>2025-26</td><td>2,01,961.5</td><td>1,92,857.77<br>(ದಿನಾಂಕ: 16.03.2026ರಂತೆ)</td></tr>
</table>
ಮೂಲ: Fertilizer subsidy division, Government of India<br><br>
ಸಣ್ಣ ರೈತರಿಗೆ ಗುಣಮಟ್ಟದ ಬೀಜಗಳು, ಜೈವಿಕ ಗೊಬ್ಬರ ಮತ್ತು ಕೀಟನಾಶಕಗಳು ಕೈಗೆಟಕುವ ದರದಲ್ಲಿ ಲಭ್ಯವಾಗುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಗಿನಂತಿವೆ:<br><br>
ಬಿತ್ತನೆ ಬೀಜ:<br><br>
ರೈತರಿಗೆ ಗುಣಮಟ್ಟದ ಬೀಜಗಳ ಪೂರೈಕೆ ಮಾಡುವ ಸಲುವಾಗಿ ರಾಜ್ಯದ ಎಲ್ಲಾ ವರ್ಗದ ರೈತರಿಗೆ ಬಿತ್ತನೆ ಬೀಜಗಳ ಪೂರೈಕೆ ಮತ್ತು ಇತರೆ ಹೂಡುವಳಿ ಯೋಜನೆಯಡಿ ರಿಯಾಯಿತಿ ದರಗಳಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ಯೋಜನೆಗಳಡಿ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ.<br><br>
ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ವಿತರಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ Request for Proposal ಕರೆದು ಬೇಡಿಕೆಯನ್ವಯ ಬೀಜ ದಾಸ್ತಾನು ಮಾಡಿ ವಿತರಣೆ ಮಾಡಲಾಗುತ್ತಿದೆ.<br><br>
ರಾಜ್ಯದ ರೈತರಿಗೆ ರಿಯಾಯಿತಿ ದರದಲ್ಲಿ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ದೊರಕಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ರೈತರಿಗೆ ಸಮೀಪದಲ್ಲಿಯೇ ಬಿತ್ತನೆ ಬೀಜಗಳನ್ನು ದೊರಕಿಸುವ ಸಲುವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವು ಸಹ ವಿತರಣೆಗೆ ವ್ಯವಸ್ಥೆ ಮಾಡಲಾಗುತ್ತಿದೆ.</td>
</tr>
</table>

| | | |
|---|---|---|
| | | **ಜೈವಿಕ ಗೊಬ್ಬರ:**<br>ಉತ್ತಮ ಗುಣಮಟ್ಟದ ಜೈವಿಕ ಗೊಬ್ಬರಗಳು ರೈತರಿಗೆ ಕೈಗೆಟಕುವ ದರದಲ್ಲಿ ಲಭ್ಯವಾಗುವ ನಿಟ್ಟಿನಲ್ಲಿ ಕೇಂದ್ರ ಪುರಸ್ಕೃತ (National Food Security and Nutrition Mission NFSNM) ಯೋಜನೆಯಡಿ ಎಲ್ಲಾ ವರ್ಗದ ರೈತರಿಗೆ ಶೇ. 50 ರ ಸಹಾಯಧನದಡಿ ರೈತ ಸಂಪರ್ಕ ಕೇಂದ್ರಗಳ ಮೂಲಕ ವಿತರಿಸಲಾಗುತ್ತಿದೆ.<br>**ಸಸ್ಯ ಸಂರಕ್ಷಣೆ:**<br>ಉತ್ತಮ ಗುಣಮಟ್ಟದ ಪೀಡೆನಾಶಕಗಳು ಕೈಗೆಟಕುವ ದರದಲ್ಲಿ ರೈತರಿಗೆ ಲಭ್ಯವಾಗುವ ನಿಟ್ಟಿನಲ್ಲಿ ರಾಜ್ಯವಲಯ ಕೃಷಿ ಪರಿಕರ ಮತ್ತು ಗುಣಮಟ್ಟ ನಿಯಂತ್ರಣ ಯೋಜನೆಯಡಿ ಸಸ್ಯ ಸಂರಕ್ಷಣಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸಸ್ಯ ಸಂರಕ್ಷಣಾ ಕಾರ್ಯಕ್ರಮದ ಜೈವಿಕ ಪೀಡೆನಾಶಕ, ಜೈವಿಕ ನಿಯಂತ್ರಣಾಕಾರಕಗಳ ಘಟಕದಡಿ ಜೈವಿಕ/ ಸಸ್ಯ ಮೂಲ ಪೀಡೆನಾಶಕಗಳನ್ನು ಹಾಗೂ ಅವಶ್ಯಕತೆಗೆ ಅನುಗುಣವಾಗಿ ಘಟಕದಡಿ ಕೀಟ/ ರೋಗ ನಿರ್ವಹಣೆ ಜೈವಿಕ/ರಾಸಾಯನಿಕ ಪೀಡೆನಾಶಕಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಶೇ. 50 ರ ಸಹಾಯಧನದಡಿ ಪ್ರತಿ ಹೆಕ್ಟೇರ್‌ಗೆ ರೂ.500 ರಂತೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ರೈತರಿಗೆ ವಿತರಿಸಲಾಗುತ್ತಿದೆ. |
| ಈ. | ಕರ್ನಾಟಕದಲ್ಲಿ ಶೇ.20 ರಷ್ಟು ಕೃಷಿ-ನವೋದ್ಯಮಗಳು ವಿಫಲವಾಗುತ್ತಿರುವುದರಿಂದ, ಅವುಗಳನ್ನು ಬೆಂಬಲಿಸಲು ವರ್ಧಿತ ಬೀಜ ನಿಧಿ (Enhanced Seed Funding) ಅಥವಾ ಮಾರುಕಟ್ಟೆ ಮಾರ್ಗದರ್ಶನದಂತಹ ಯಾವ ಹೊಸ ಕ್ರಮಗಳನ್ನು ಈ ವರ್ಷ ಪರಿಚಯಿಸಲಾಗುವುದು? | ಕರ್ನಾಟಕದಲ್ಲಿ ಕೃಷಿ ನವೋದ್ಯಮಗಳನ್ನು ಬೆಂಬಲಿಸಲು ವರ್ಧಿತ ಬೀಜ ನಿಧಿ (Enhanced Seed Funding) ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಮಾರುಕಟ್ಟೆ ಮಾರ್ಗದರ್ಶನ ನೀಡಲು ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಮೂಲಕ ರಫ್ತು ಆಧಾರಿತ ತರಬೇತಿಗಳನ್ನು ಕರ್ನಾಟಕ ರೈತ ಸಮೃದ್ಧಿ ಯೋಜನೆಯಡಿ ನೀಡಲಾಗುತ್ತಿದ್ದು, ಇದರಲ್ಲಿ ಕೃಷಿ ನವೋದ್ಯಮಗಳು ಭಾಗವಹಿಸಲು ಪ್ರಸಕ್ತ ಸಾಲಿನಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. |

ಕಡತ ಸಂಖ್ಯೆ:ಕಂಇ 286 ಟಿಎನ್‌ಆರ್ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು